PWD

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 12 ಜಿಲ್ಲೆಗಳ 28 ವಕ್ಫ್ ಸ್ವತ್ತುಗಳ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: MWD 155 WES 2011(P) ದಿನಾಂಕ:28-04-2011

2) ಸರ್ಕಾರಿ ಆದೇಶ ಸಂಖ್ಯೆ: MWD 159 MDS 2021, ದಿನಾಂಕ:27.04.2021, 01.07.2021 ಮತ್ತು 22.10.2021

3) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು, ಇವರ ಪ್ರಸ್ತಾವನೆ.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ದಿನಾಂಕ:28-04-2011 ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದ ವಕ್ಫ್ ಆಸ್ತಿಗಳಾದ ಖಬರಸ್ಥಾನ, ಈದ್ಗಾದ ಜಾಗಗಳನ್ನು ಅಕ್ರಮ ಒತ್ತುವರಿ, ಅನಧೀಕೃತ ಸ್ವಾಧೀನ ಮತ್ತು ವಿವಾದಗಳಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ತಡೆಯಲು ಆಸ್ತಿಗಳ ಸುತ್ತ ಬೇಲಿ/ಗೋಡೆಯನ್ನು ಹಾಕುವುದು ಅತ್ಯವಶ್ಯಕವಾಗಿರುತ್ತದೆ. ಅದನ್ನು ಸಂರಕ್ಷಣೆ ಮಾಡುವ ಯೋಜನೆಯಡಿ ಕೆಲವು ನಿಬಂಧನೆಗಳನ್ನು ರೂಪಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:27-04-2021, 01-07-2021 ಮತ್ತು 22-10-2021 ರ ಸರ್ಕಾರಿ ಆದೇಶಗಳಲ್ಲಿ ವಕ್ಫ್ ಸ್ವತ್ತಿನ ಸಂರಕ್ಷಣೆಗಾಗಿ 2020-21ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2225-04-102-0-03(059) (ಯೋಜನೆ) ರಡಿಯಲ್ಲಿ ಸರ್ಕಾರವು ರೂ.1550.00ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು ಮೊದಲನೇ, ಎರಡನೇ ಹಾಗೂ ಮೂರನೇ ಕಂತಿನ ಅನುದಾನ ರೂ.1162.50ಲಕ್ಷ ಮಂಜೂರು ಮಾಡಲಾಗಿದೆ.

ಮೇಲೆ (3)ರಲ್ಲಿ ಓದಲಾದ ಮುಖ್ಯ ಕಾರ್ಯನಿರ್ವಾಹಣಾದಿಕಾರಿ, ಕರ್ನಾಟಕ ರಾಜ್ಯ, ವಕ್ಫ್ ಮಂಡಳಿಯಿಂದ ಪ್ರಸ್ತಾವನೆಗಳನ್ನು ಪಡೆಯಲಾಗಿದ್ದು, ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

.........2

D:\Mansoora\

Scanned with CamScanner

Scanned with CamScanner

ಸರ್ಕಾರದ ಆದೇಶ ಸಂಖ್ಯೆ: MWD 02 WGA 2021(2),ಬೆಂಗಳೂರು,ದಿನಾಂಕ: 08-11-2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2021-22 ಸಾಲಿನ ಅನುದಾನದಲ್ಲಿ ರಾಜ್ಯದ 12 ಜಿಲ್ಲೆಗಳ 28 ವಕ್ಫ್ ಸ್ವತ್ತುಗಳ ಸಂರಕ್ಷಣೆಗೆ ಕಾಂಪೌಂಡ್ ಗೋಡೆ ನಿರ್ಮಿಸಲು ಒಟ್ಟು ರೂ.484.45 ಲಕ್ಷಗಳು (ನಾಲ್ಕು ಕೋಟಿ ಎಂಭತ್ತನಾಲ್ಕು ಲಕ್ಷ ನಲವತ್ತೈದು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಮಂಜೂರು ಮಾಡಿದ್ದು ಅನುಬಂಧದಲ್ಲಿ ಆ ಸಂಸ್ಥೆಗಳ ಎದುರಿಗೆ ಸೂಚಿಸಲಾಗಿರುವ ಪ್ರತ್ಯೇಕ ಮೊತ್ತವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಆದೇಶಿಸಿದೆ.

## ಷರತ್ತುಗಳು:

1. 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ "2225-04-102-0-03(059)" ರಡಿಯಲ್ಲಿ ವಕ್ಫ್ ಸ್ವತ್ತುಗಳಿಗೆ ಮಂಜೂರು ಮಾಡಿರುವ ಅನುದಾನವನ್ನು ವಕ್ಫ್ ಸ್ವತ್ತುಗಳ ಸಂರಕ್ಷಣೆಗಾಗಿ (ಯೋಜನೆ) ಸಹಾಯಾನುದಾನ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು

2. ಮೇಲೆ ಓದಲಾದ (1)ರ ಆದೇಶದಂತೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು Grant-in-Aid ನಲ್ಲಿರುವ ಸೂಚನೆಗಳನ್ನು ವಕ್ಫ್ ಸಂಸ್ಥೆಗಳಿಗೆ ಹಣ ಬಿಡುಗಡೆಗೊಳಿಸುವ ಮುನ್ನ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

3. ರೂ.5.00ಲಕ್ಷಕ್ಕಿಂತ ಹೆಚ್ಚು ಅನುದಾನ ಮಂಜೂರು ಮಾಡಲಾಗಿರುವ ವಕ್ಫ್ ಸಂಸ್ಥೆಗಳಿಗೆ ಮೊದಲನೇ ಕಂತಿನ ರೂ.5.00 ಲಕ್ಷಗಳನ್ನು ಪ್ರಥಮ ಕಂತಿನಲ್ಲಿ ಬಿಡುಗಡೆ ಮಾಡಿ ಇನ್ನುಳಿದ ಮೊತ್ತವನ್ನು ಎರಡನೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು. 2ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಮೊದಲು ಕಾಮಗಾರಿಯ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ಪ್ರಗತಿಯಾದಲ್ಲಿ ಮಾತ್ರ ಅನುದಾನ ಬಿಡುಗಡೆ ಮಾಡತಕ್ಕದ್ದು.

4. ರೂ.5.00ಲಕ್ಷಕ್ಕಿಂತ ಕಡಿಮೆ ಅನುದಾನ ಮಂಜೂರಾಗಿರುವ ವಕ್ಫ್ ಸಂಸ್ಥೆಗಳಿಗೆ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು.

5. ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮತ್ತು ಜಿಲ್ಲಾ ವಕ್ಫ್ ಸಲಹಾ ಸಮಿತಿಯವರು ಆದೇಶ ಹೊರಡಿಸಿದ 2 ತಿಂಗಳ ಒಳಗಾಗಿ ಸದರಿ ಎಲ್ಲಾ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡುವುದು ಸದರಿ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆಗೊಳಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಬಳಕೆಯಾಗಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಸಂಸ್ಥೆಗಳು ಕಡ್ಡಾಯವಾಗಿ ಕಳುಹಿಸತಕ್ಕದ್ದು.

D:\Mansoora\

Scanned with CamScanner

Scanned with CamScanner

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2021. ದಿನಾಂಕ:05.04.2021 ಹಾಗೂ 30.09.2021 ರನ್ವಯ ಸರ್ಕಾರದ ಕಾರ್ಯದರ್ಶಿಯವರಿಗೆ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಹಿಬೂಬ ಸಾಬ)
ಸರ್ಕಾರದ ಉಪ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ). ಕರ್ನಾಟಕ. ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು. ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ. ಇವರ ಆಪ್ತ ಸಹಾಯಕರು. ವಿಕಾಸ ಸೌಧ. ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿಗಳು. ಆರ್ಥಿಕ ಇಲಾಖೆ (ವೆಚ್ಚ) ವಿಧಾನ ಸೌಧ. ಬೆಂಗಳೂರು.
4) ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು. ಕರ್ನಾಟಕ ರಾಜ್ಯ ವಕ್ಫ್ ಮಂಡಳಿ. ಕನ್ನಿಂಗ್ ಹ್ಯಾಂ ರಸ್ತೆ. ಬೆಂಗಳೂರು.
5) ಸರ್ಕಾರದ ಉಪ ಕಾರ್ಯದರ್ಶಿ. ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ. ಇವರ ಆಪ್ತ ಸಹಾಯಕರು. ಬೆಂಗಳೂರು
6) ಮಾನ್ಯ ಹಜ್ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಕಾಸ ಸೌಧ. ಬೆಂಗಳೂರು
7) ಸಮನ್ವಯ ಅಧಿಕಾರಿ. ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ 24•7. ವಸಂತನಗರ. ಬೆಂಗಳೂರು.
8) ಅಧ್ಯಕ್ಷರು/ವಕ್ಫ್ ಅಧಿಕಾರಿಗಳು. ಜಿಲ್ಲಾ ವಕ್ಫ್ ಸಲಹಾ ಸಮಿತಿ ಚಿಕ್ಕಮಗಳೂರು. ಉತ್ತರಕನ್ನಡ. ಶಿವಮೊಗ್ಗ. ಕಲಬುರಗಿ. ದಕ್ಷಿಣ ಕನ್ನಡ. ತುಮಕೂರು. ದಾರವಾಡ. ಬಳ್ಳಾರಿ. ಯಾದಗಿರಿ. ಬೆಂಗಳೂರು. ರಾಯಚೂರು ಮತ್ತು ಬೆಳಗಾವಿ ಜಿಲ್ಲೆ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

~~~~~*****~~~~~~

D:\Mansoora\

Scanned with CamScanner

Scanned with CamScanner
~~~~~

**ಸರ್ಕಾರದ ಆದೇಶ ಸಂಖ್ಯೆ: MWD 02 WGA 2021(1),**
**ಬೆಂಗಳೂರು,ದಿನಾಂಕ: 08-11-2021 ಕ್ಕೆ**
**ಅನುಬಂಧ**

## ಕಾಂಪೌಂಡ್ ಗೋಡೆ ನಿರ್ಮಾಣಕ್ಕಾಗಿ

| ಕ್ರ.ಸಂ. | ಹೆಸರು ಮತ್ತು ವಿವರ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಜಾಮಿಯ ಮಸೀದಿ ಸುನ್ನಿ, ಲಿಂಗದಹಳ್ಳಿ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ. | 20.00 |
| 2 | ಅಂಜುಮನ್ ಅಹ್ಲೆ ಸುನ್ನತ್, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ | 25.00 |
| 3 | ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು, ಮಂಡಗದ್ದೆ ಹೋಬಳಿ, ಮಾಳೂರು ಗ್ರಾಮದ ಸರ್ವೆ ನಂ. 83 ರಲ್ಲಿ ಇರುವ ಮಸೀದಿ. | 15.00 |
| 4 | ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು, ಮಂಡಗದ್ದೆ ಹೋಬಳಿ, ಮಾಳೂರು ಗ್ರಾಮದ ಸರ್ವೆ ನಂ. 96 ರಲ್ಲಿ ಇರುವ ಮಸೀದಿ. | 10.00 |
| 5 | ಖಬರಸ್ತಾನ್ ಕಾಂಪೌಂಡ್ ನಿರ್ಮಾಣ, ಆಳಂಗ ಗ್ರಾಮ, ಆಳಂದ ತಾಲೂಕು, ಕಲಬುರಗಿ ಜಿಲ್ಲೆ | 10.00 |
| 6 | ಖಬರಸ್ತಾನ್ ಕಾಂಪೌಂಡ್ ನಿರ್ಮಾಣ, ರುದ್ರವಾಡಿ ಗ್ರಾಮ, ಆಳಂದ ತಾಲೂಕು, ಕಲಬುರಗಿ ಜಿಲ್ಲೆ | 10.00 |
| 7 | ಬರ್ಕತ್‌ತುಲ್ ಇಸ್ಲಾಂ ಮುಹಿಯ್ಯದ್ದೀನ ಕೇಂದ್ರ ಜುಮ್ಮಾ ಮಸೀದಿ, ಕಡಬ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | 21.00 |
| 8 | ಖಬರಸ್ತಾನ್ ಕಾಂಪೌಂಡ್ ನಿರ್ಮಾಣ, ಕೆಂಚನಹಳ್ಳಿ ಗ್ರಾಮ, ಸಿ.ಕೋಡಿಗೇಹಳ್ಳಿ ಅಂಚೆ, ಗುಬ್ಬ ತಾಲೂಕು, ತುಮಕೂರು ಜಿಲ್ಲೆ | 15.00 |
| 9 | ಅಹಲೇ ಸುನ್ನತ ರೋಷನ್ ಜಮಾತ, ಆಶ್ರಯ ಪ್ಲಾಟ್, ಬಸವೇಶ್ವರ ನಗರ, ನವಲಗುಂದ ಪಟ್ಟಣ, ಧಾರವಾಡ ಜಿಲ್ಲೆ. | 25.00 |
| 10 | ಮುಸ್ಲಿಂ ಶಾದಿಮಹಲ್ (ಸುನ್ನಿ) ಮತ್ತು ಕಾಂಪೌಂಡ್ ನಿರ್ಮಾಣಕ್ಕೆ, ಉತ್ತನೂರು ಗ್ರಾಮ, ಸಿರಗುಪ್ಪ ತಾಲೂಕು, ಬಳ್ಳಾರಿ ಜಿಲ್ಲೆ. | 15.00 |
| 11 | ಅರಬಿ ಮದರಸ (ಸುನ್ನಿ) ಜಮಾತ್, ದೇವಲಗುಡ್ಡ ಗ್ರಾಮ, ಸುರಪುರ ತಾಲೂಕು, ಯಾದಗಿರಿ ಜಿಲ್ಲೆ | 13.00 |
| 12 | ಅಬ್ದುಲ್ ರಿಯಾಜ್ ಜುಮ್ಮಾ ಮಸ್ಜೀದ್ ಕಬರ್‌ಸ್ತಾನ್ ಕಾಂಪೌಂಡ್ ನಿರ್ಮಾಣ, ಎಲಿಮಲೆ, ದೇವಚಳ್ಳ ಗ್ರಾಮ, ಸುಳ್ಯ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ | 13.00 |
| 13 | ನೂರಾನಿ ಮಸೀದಿ, ಪಟ್ಟನಾಯಕನಹಳ್ಳಿ ಗ್ರಾಮ, ಗೌಡಗೆರೆ ಹೋಬಳಿ, ಸಿರಾ ತಾಲೂಕು, ತುಮಕೂರು ಜಿಲ್ಲೆ | 15.00 |
| 14 | ಜಾಮಿಯಾ ಮಸ್ಜಿದ್, ಕೆಂಗೇರಿ, ಬೆಂಗಳೂರು-ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-560060. | 25.00 |
| 15 | ಖಬರಸ್ತಾನ್ ಕಾಂಪೌಂಡ್ ನಿರ್ಮಾಣಕ್ಕೆ, ಹಂಗರಗಾ ಬಿ. ಗ್ರಾಮ, ಯಡ್ರಾಮಿ ತಾಲೂಕು, ಜೇವರ್ಗಿ ತಾಲೂಕು, ಕಲಬುರಗಿ ಜಿಲ್ಲೆ. | 10.00 |
| 16 | ಜಾಮೀಯಾ ಮಸೀದ್, ಸೈದಾಪೂರ ಗ್ರಾಮ, ಯಡ್ರಾಮಿ ತಾಲೂಕು, ಜೇವರ್ಗಿ ತಾಲೂಕು, ಕಲಬುರಗಿ ಜಿಲ್ಲೆ. | 10.00 |
| 17 | ಕಿಮಾನಿ ಖಬರಸ್ತಾನ ಕಾಂಪೌಂಡ್ ನಿರ್ಮಾಣಕ್ಕೆ, ಪಡುವಣಿ ಗ್ರಾಮ, ಕುಮಟಾ ತಾಲೂಕು, ಉತ್ತರ ಕನ್ನಡ ಜಿಲ್ಲೆ. | 20.00 |
| 18 | ಇಮಾಮ ಖಾಸಿಂ ಅಶ್ರುಖಾನೆ ಸುನ್ನಿ, ಸಿವಂಗಿ ಗ್ರಾಮ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ. | 20.00 |
| 19 | ಖಬರಸ್ತಾನ್ ಕಾಂಪೌಂಡ್ ನಿರ್ಮಾಣ, ಇಜೇರಿ ಗ್ರಾಮ, ಜೇವರ್ಗಿ ತಾಲೂಕು, ಕಲುಬುರಗಿ ಜಿಲ್ಲೆ. | 20.00 |

......2

D:\Mansoora\

Scanned with CamScanner

Scanned with CamScanner

(ರೂ.ಲಕ್ಷಗಳಲ್ಲಿ)

| | | |
|---|---|---|
| 20 | ಖ್ವಾಜಾ ಅಮೀನುದ್ದಿನ ದರ್ಗಾ, ಸಂಶಿ ಗ್ರಾಮ, ಕುಂದಗೋಳ ತಾಲೂಕು, ಧಾರವಾಡ ಜಿಲ್ಲೆ. | 10.00 |
| 21 | ಖಬರಸ್ತಾನ್ ಮತ್ತು ಈದ್ಗಾ, ಸಿದ್ರಾಂಪೂರ್, ಸಿಂಧನೂರು ತಾಲೂಕು, ರಾಯಚೂರು ಜಿಲ್ಲೆ. | 8.45 |
| 22 | ಸುನ್ನತ ಮುಸ್ಲಿಂ ಜಮಾತ, ಅಕ್ಕೋಳ, ನಿಪ್ಪಾಣಿ ತಾಲೂಕು, ಬೆಳಗಾವಿ ಜಿಲ್ಲೆ | 20.00 |
| 23 | ಅಂಜುಮನ್ ಮುಸ್ಲಿಂ ಬೋರ್ಡಿಂಗ್ ಸಂಸ್ಥೆ ನಿಪ್ಪಾಣಿ ನಗರ, ನಿಪ್ಪಾಣಿ ತಾಲೂಕು, ಬೆಳಗಾವಿ ಜಿಲ್ಲೆ | 25.00 |
| 24 | ಸನ್ನತುಲ್ ಮುಸ್ಲಿಂ ಜಮಾತಾ, ಕನ್ನೂರು ಗ್ರಾಮ, ನಿಪ್ಪಾಣಿ ತಾಲೂಕು, ಬೆಳಗಾವಿ ಜಿಲ್ಲೆ | 25.00 |
| 25 | ಅಂಜುಮನ್ ಮುಸ್ಲಿಂ ಬೋರ್ಡಿಂಗ್, ಭೀಮ್‌ನಗರ, ನಿಪ್ಪಾಣಿ ತಾಲೂಕು, ಬೆಳಗಾವಿ ಜಿಲ್ಲೆ | 30.00 |
| 26 | ಹಜರತ ಮಹಾಸಾಹೇಬಾ ದರ್ಗಾ, ಸುನ್ನಿ ಜುಗೋಳ, ಕಾಗವಾಡ ತಾಲೂಕು, ಬೆಳಗಾವಿ ಜಿಲ್ಲೆ. | 30.00 |
| 27 | ಬಿಲಾನಸಾಬ ದರ್ಗಾ ಹಿರೇಕೋಡಿ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | 14.00 |
| 28 | ತುಮಕೂರು ಜಿಲ್ಲೆ, ತಿಪಟೂರು ತಾಲೂಕು, ಗುರುಗದಹಳ್ಳಿ ಗ್ರಾಮದ ದರ್ಗಾ ಅಭಿವೃದ್ಧಿ. | 10.00 |
| | ಒಟ್ಟು ರೂ. | 484.45 |

(ನಾಲ್ಕು ಕೋಟಿ ಎಂಭತ್ತನಾಲ್ಕು ಲಕ್ಷ ನಲವತ್ತೈದು ಸಾವಿರ ರೂಪಾಯಿಗಳು ಮಾತ್ರ)

(ಮಹಿಬೂಬ ಸಾಬ)
ಸರ್ಕಾರದ ಉಪ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ.

D:\Mansoora\

Scanned with CamScanner

Scanned with CamScanner